ಎಂ.ವಿ.ಸಿ. ನಂಃ 828/2025
ಪಿ.ಡಬ್ಲ್ಯೂ-2 (ಡಾ.ಗಂಗಾಧರ)

ದಿನಾಂಕ: 05-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಎಚ್.ಎ.ಕೆ. ಅರ್ಜಿದಾರ ಪರ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ನಿಪಿ-13ನ್ನು ನಾನೇ ಕೊಟ್ಟಿರುತ್ತೇನೆ.

**<u>ಪಾಟೀಸವಾಲುಃ ಶ್ರೀ.ಎಮ್.ಎಮ್.ಕೆ. 2ನೇ ಎದುರುದಾರ ಪರ ವಕೀಲರಿಂದಃ</u>**

ಅರ್ಜಿದಾರರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಾಗ ಪ್ರಜ್ಞೆ ಇತ್ತು. ಅರ್ಜಿದಾರರು ವಯಸ್ಸು ಎಷ್ಟು ಎಂದು ನಾನು ವಿಚಾರಿಸಿಲ್ಲ. ಅರ್ಜಿದಾರರು ಅವರ ವಯಸ್ಸು ನಮಗೆ ಹೇಳಿದ ಪ್ರಕಾರ ಅವರ ವಯಸ್ಸು ನಮ್ಮ ದಾಖಲೆಯಲ್ಲಿ ದಾಖಲಿಸಿಕೊಂಡಿದ್ದೇನೆ.

2. ಅರ್ಜಿದಾರರು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಬಂದ ದಿನವೇ ಪೊಲೀಸ ಠಾಣೆಗೆ ಮಾಹಿತಿ ಕೊಟ್ಟಿರುತ್ತೇವೆ. ಪೊಲೀಸರಿಗೆ ಕೊಟ್ಟ ಮಾಹಿತಿಯಲ್ಲಿ ಅಪಘಾತ ಆದ ವಿವರಣೆ ಕೊಟ್ಟು ಕಳುಹಿಸಿಲ್ಲ. ಯಲ್ಲಪ್ಪ ನೇಸರ್ಗಿ ಎನ್ನುವವರು ಅರ್ಜಿದಾರರನ್ನು ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ.

3. ಅರ್ಜಿದಾರರಿಗೆ ಬಲಗಾಲಿನ ಮೊಣಕಾಲಿನ ಮೂಳೆ ಮುರಿತ ಹಾಗೂ ಟಿಬಿಯಾ ಮೂಳೆ ಮುರಿತ ಆಗಿತ್ತು ಮತ್ತು ಬಲಗಾಲಿಗೆ ತರಚಿದ ಗಾಯ ಆಗಿತ್ತು. ಅರ್ಜಿದಾರರ ಬಲಗಾಗಲಿನ ಟಿಬಿಯಾ ಮೂಳೆ ಮುರಿತಕ್ಕೆ ದಿಃ 18/02/2025 ರಂದು ಶಸ್ತ್ರ ಚಿಕಿತ್ಸೆ ಮಾಡಿರುತ್ತೇನೆ ಹಾಗೂ ಬಲಗಾಲಿಗೆ ಪ್ಲಾಸ್ಟರ್ ಹಾಕಿರುತ್ತೇನೆ. ಅರ್ಜಿದಾರರ ಬಲಗಾಲಿಗೆ ಆದ ತರಚಿದ ಗಾಯಕ್ಕೆ ದಿಃ 18/02/2025 ರಂದು ಚರ್ಮಕಸಿ ಮಾಡಿಲ್ಲ. ತರಚಿದ ಗಾಯದ ಮೇಲೆ ಪ್ಲಾಸ್ಟರ್ ಹಾಕಿದ ಪಕ್ಷದಲ್ಲಿ ಹೆಚ್ಚಿಗೆ ನೋವು ಆಗುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರ ಚಿಕಿತ್ಸೆಗೆ ಸಂಬಂಧಪಟ್ಟ ಕೇಸ್ ಶೀಟ್ ಹಾಜರ ಮಾಡಿಲ್ಲ.

4. ಅರ್ಜಿದಾರರು ಮುಂದುವರೆದ ಚಿಕಿತ್ಸೆಗಾಗಿ ಬಂದಾಗ ಏನೇನು ಚಿಕಿತ್ಸೆ ಕೊಡಲಾಗಿದೆ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹಾಗೂ ಅಂಗ ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ಅರ್ಜಿದಾರರಿಗೆ ಆದ ಗಾಯಕ್ಕೆ ಎಷ್ಟು ಪ್ರಮಾಣದಲ್ಲಿ ನೋವು ಇತ್ತು ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿಲ್ಲ. ಅರ್ಜಿದಾರರ ಬಲಗಾಲು ಕಿರಿದಾಗಿಲ್ಲ. ಅರ್ಜಿದಾರರ ಮೂಳೆ ಮುರಿತಕ್ಕೆ ಅಳವಡಿಸಿದ ಒಳಜೋಡನೆಗಳು ಇನ್ನು ತೆಗೆದಿಲ್ಲ. ಅರ್ಜಿದಾರರ ಮೂಳೆ ಮುರಿತಕ್ಕೆ ಅಳವಡಿಸಿದ ಒಳಜೋಡನೆಗಳು ಇನ್ನು ಇದ್ದುದ್ದರಿಂದ ಅವರಿಗೆ ನೋವು ಮತ್ತು ತೊಂದರೆಗಳು ಇರುತ್ತವೆ ಎಂದರೆ ಸರಿಯಲ್ಲ.

5. ಅರ್ಜಿದಾರರ ಬಲಗಾಲಿಗೆ ಆದ ತರಚಿದ ಗಾಯಗಳಿಂದ ಬಲಗಾಲಿನ ನರಗಳಿಗೆ ಯಾವುದೇ ತೊಂದರೆ ಆಗಿಲ್ಲ. ಅದೇ ರೀತಿ ಅರ್ಜಿದಾರರ ಬಲಗಾಲಿಗೆ ಸೊಂಕು ಆಗಿಲ್ಲ ಆದರೆ ಚರ್ಮಕಸಿ ಮಾಡಿದ ಜಾಗದಲ್ಲಿ ಅರ್ಜಿದಾರರಿಗೆ ಸ್ಪರ್ಷ ಜ್ಞಾನ ಇರುವುದಿಲ್ಲ. ಈ ವಿಷಯವನ್ನು ನಾನು ಅಂಗ ನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ.

6. ಅರ್ಜಿದಾರರಿಗೆ ತೊಂದರೆ ಇರುವ ಬಗ್ಗೆ ನಾನು ಅರ್ಜಿದಾರರನ್ನು ವೈದ್ಯಕೀಯವಾಗಿ ಪರೀಕ್ಷೆ ಮಾಡುವಾಗ ಬರೆದುಕೊಂಡಿದ್ದನ್ನು ಹಾಜರ ಮಾಡಿಲ್ಲ. ಅರ್ಜಿದಾರರ ಬಲಗಾಲಿಗೆ ಆದ ಮೂಳೆ ಮುರಿತ ಈಗ ಕೂಡಿಕೊಂಡಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅರ್ಜಿದಾರರಿಗೆ ಇರುವ ತೊಂದರೆಗಳ ಬಗ್ಗೆ ಪ್ರತ್ಯೇಕವಾಗಿ ಎಷ್ಟು ಪ್ರಮಾಣದಲ್ಲಿ ತೊಂದರೆಗಳು ಇವೆ ಎಂದು ನಮೂದಿಸಿಲ್ಲ. ಅರ್ಜಿದಾರರ ಬಲಗಾಲಿಗೆ ಆದ ತರಚಿದ ಗಾಯಕ್ಕೆ ಹಾಗೂ ಮೂಳೆ ಮುರಿತಕ್ಕೆ ಎಷ್ಟು ಪ್ರಮಾಣದಲ್ಲಿ ಅಂಗ ನ್ಯೂನ್ಯತೆ ಕೊಟ್ಟಿದ್ದೇನೆಂದು ಪ್ರತ್ಯೇಕವಾಗಿ ಹೇಳಿಲ್ಲ ಎಂದರೆ ಸರಿ.

7. ಅರ್ಜಿದಾರರಿಗೆ ಫಿಜಿಯೋಥೆರೆಪಿ ಮಾಡಲು ವ್ಯಾಯಾಮಗಳನ್ನು ನಾವೇ ಹೇಳಿಕೊಟ್ಟಿರುತ್ತೇವೆ. ನಾನು ಫಿಜಿಯೋಥೆರೆಪಿಸ್ಟ್ ಅಲ್ಲ ಎಂದರೆ ಸರಿ. ಫಿಜಿಯೋಥೆರೆಪಿ ಮಾಡುವುದರಿಂದ ಅಂಗಾಂಗಗಳ ಚಲನ ವಲನದಲ್ಲಿ ಇದ್ದ ತೊಂದರೆಗಳು ಕಡಿಮೆಯಾಗುತ್ತವೆ.

8. ಅರ್ಜಿದಾರರಿಗೆ ಆದ ಗಾಯಗಳಿಗೆ ಸರಕಾರಿ ವೈದ್ಯರನ್ನು ಕರೆಯಿಸಿ ಅವರ ಅಂಗ ಪರೀಕ್ಷೆಯನ್ನು ಮಾಡಿಲ್ಲ. ಅರ್ಜಿದಾರರಿಗೆ ಆದ ತರಚಿದ ಗಾಯ ಈಗ ವಾಸಿಯಾಗಿರುತ್ತದೆ. WHO ನಿರ್ದೇಶನ ಪ್ರಕಾರ ತರಚಿದ ಗಾಯಗಳಾದಲ್ಲಿ ನರಗಳಿಗೆ ಗಾಯ ಆದಾಗ ಮಾತ್ರ ಅಂಗ ನ್ಯೂನ್ಯತೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆದ ಗಾಯಗಳಿಂದ ಎಷ್ಟು ಪ್ರಮಾಣದಲ್ಲಿ ಮಾಂಸಖಂಡಗಳು ನಷ್ಟ ಆಗಿವೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ.

9. ಅರ್ಜಿದಾರರಿಗೆ ಸಹಾಯ ಆಗಲಿ ಎಂದು ಹೆಚ್ಚಿನ ಪ್ರಮಾಣದಲ್ಲಿ ಆಸ್ಪತ್ರೆ ಮತ್ತು ಔಷಧಿ ಬಿಲ್ಲುಗಳನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಬಳಿ ನಮ್ಮ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಆಸ್ಪತ್ರೆ ಮತ್ತು ಔಷಧಿ ಬಿಲ್ಲುಗಳನ್ನು ಕೊಟ್ಟಿರುತ್ತೇನೆ ಮತ್ತು ಹೆಚ್ಚಿನ ಪ್ರಮಾಣದಲ್ಲಿ ಅಂಗ ನ್ಯೂನ್ಯತೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

10. ಅರ್ಜಿದಾರರಿಗೆ ಅನುಕೂಲ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಈಗ ಮೊದಲಿನ ಹಾಗೆ ಕೆಲಸ ಮಾಡುತ್ತಿದ್ದರೂ ಸಹ ಅವರಿಗೆ ಮೊದಲಿನ ಹಾಗೆ ಕೆಲಸ ಮಾಡಲು ಆಗುವುದಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ